Office of the Malnad College of Engineering, Hassan
No. 482
Dt. 17-7-25

ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂ: **DTE-ADMI0SCH1/11/2025**

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ ಬೆಂಗಳೂರು - 560 001.
ದಿನಾಂಕ: 16-07-2025

**-:: ಸುತ್ತೋಲೆ ::-**

ವಿಷಯ : 2025-26ನೇ ಸಾಲಿಗೆ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಎ.ಐ.ಸಿ.ಟಿ.ಇ ಯ ಪ್ರಗತಿ, ಸಕ್ಷಮ್ ಮತ್ತು ಸ್ವನಾಥ್ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ಬಗ್ಗೆ.

ಉಲ್ಲೇಖ : ಸದಸ್ಯ ಕಾರ್ಯದರ್ಶಿಗಳು, ಎ.ಐ.ಸಿ.ಟಿ.ಇ ನವದೆಹಲಿ ಇವರ ಅಧಿಸೂಚನ ಪತ್ರ ಸಂಖ್ಯೆ: AICTE/StDC-SAG /Sch./Adv./Pragati , Saksham & Swanath/2025-26, Date: 18-06-2025.

-000000-

ಎ.ಐ.ಸಿ.ಟಿ.ಇ ಯಿಂದ ಮಾನ್ಯತೆ ಪಡೆದಿರುವ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಮತ್ತು ವಿಶೇಷ ಸಾಮರ್ಥ್ಯದ ಮಕ್ಕಳ ಪ್ರಗತಿಗಾಗಿ, ಆರ್ಥಿಕ ನೆರವು ನೀಡಲು ಎ.ಐ.ಸಿ.ಟಿ.ಇಯು ಪ್ರಗತಿ, ಸಕ್ಷಮ್ ಮತ್ತು ಸ್ವನಾಥ್ ವಿದ್ಯಾರ್ಥಿವೇತನ ಯೋಜನೆಗಳನ್ನು ಈ ಕೆಳಕಂಡಂತೆ ಪ್ರಾರಂಭಿಸಲಾಗಿರುತ್ತದೆ.

1. **ಪ್ರಗತಿ ವಿದ್ಯಾರ್ಥಿವೇತನ ಯೋಜನೆ** - ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕುಟುಂಬದ ವಾರ್ಷಿಕ ಆದಾಯ ರೂ.8.00 ಲಕ್ಷ ಮಿತಿಯೊಳಗೆ ಇರುವ ಕುಟುಂಬದ 02 ವಿದ್ಯಾರ್ಥಿನಿಯರಿಗೆ ಮಾತ್ರ.

2. **ಸಕ್ಷಮ್ ವಿದ್ಯಾರ್ಥಿವೇತನ ಯೋಜನೆ** - ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕುಟುಂಬದ ವಾರ್ಷಿಕ ಆದಾಯ ರೂ.8.00 ಲಕ್ಷ ಮಿತಿಯೊಳಗೆ ಇರುವ ಶೇ.40ಕ್ಕಿಂತ ಹೆಚ್ಚು ವಿಶೇಷ ಸಾಮರ್ಥ್ಯ ಹೊಂದಿರುವ ವಿದ್ಯಾರ್ಥಿಗಳಿಗೆ ಮಾತ್ರ.

3. **ಸ್ವನಾಥ್ ವಿದ್ಯಾರ್ಥಿವೇತನ ಯೋಜನೆ** - ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕುಟುಂಬದ ವಾರ್ಷಿಕ ಆದಾಯ ರೂ.8.00 ಲಕ್ಷ ಮಿತಿಯೊಳಗೆ ಇರುವ ವಿದ್ಯಾರ್ಥಿಯು ಈ ಕೆಳಗಿನ ಯಾವುದಾದರು ಒಂದು ವರ್ಗದಿಂದ ಬಂದವರಾಗಿರಬೇಕು.

Dean-SA

ಅನಾಥರಗಿರಬೇಕು / ಪೋಷಕರು ಕೋವಿಡ್-19 ನಿಂದ ಸಾವನ್ನಪ್ಪಿರಬೇಕು / ಸಶಸ್ತ್ರ ಪಡೆಗಳ ವಾರ್ಡ್‌ಗಳು ಮತ್ತು ಕೇಂದ್ರ ಅರೆಸೈನಿಕ ಪಡೆಗಳ ಕಾರ್ಯಾಚರಣೆಯಲ್ಲಿ ಹುತಾತ್ಮರಾಗಿರುವ (ಶಹೀದ್) ವಿದ್ಯಾರ್ಥಿಗಳಿಗೆ ಮಾತ್ರ.

17/7/25

ಮುಂದುವರೆದು, ಉಲ್ಲೇಖದ ಅಧಿಸೂಚನೆಯಲ್ಲಿ ತಿಳಿಸಿರುವಂತೆ 2025-26ನೇ ಸಾಲಿಗೆ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಮತ್ತು ವಿಶೇಷ ಸಾಮರ್ಥ್ಯದ ಮಕ್ಕಳಿಗೆ ಮಾತ್ರ ಎ.ಐ.ಸಿ.ಟಿ.ಇ ಯ ಪ್ರಗತಿ , ಸಕ್ಷಮ್ ಮತ್ತು ಸ್ವನಾಥ್ ವಿದ್ಯಾರ್ಥಿವೇತನ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿದ್ದು, ಅದರಂತೆ ಪ್ರತಿಯೊಬ್ಬ ಅರ್ಹ ವಿದ್ಯಾರ್ಥಿಯು ಸರ್ಕಾರದ ಯಾವುದಾದರೂ ಒಂದು ಆರ್ಥಿಕ ಸೌಲಭ್ಯವನ್ನು ಮಾತ್ರ ಪಡೆಯಲು ಅರ್ಹರಾಗಿರುತ್ತಾರೆ.

"ವಿವಿಧ ಯೋಜನೆಯಡಿಗಳಲ್ಲಿ ವಿದ್ಯಾರ್ಥಿವೇತನಕ್ಕೆ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸುವ ಮೊದಲು ವಿದ್ಯಾರ್ಥಿಗಳು ತಾವು ಹೊಂದಿರುವ ರಾಷ್ಟ್ರೀಕೃತ ಬ್ಯಾಂಕ್ ಖಾತೆಗಳಿಗೆ ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ ಜೋಡಣೆ (**NPCI Link - aadhaar number to Bank Account**) ಮಾಡಲು ಸಂಸ್ಥೆಯವರು ವಿದ್ಯಾರ್ಥಿಗಳಿಗೆ ತಿಳಿಸುವುದು".

TO Scholarship adm